ಇರ್ಲಿ. ಎಂಥದಿದ್ರು ಎಲ್ಲ ಸಾ ನಮಿಗೇ ಸೇರುದಲ್ವಾ? ಅಂತ ಹುಳಿ ಹುಳೀ ನೆಗೆ ಆಡಿಕೊಂಡು ಹೇಳಿದ. ಅವ್ರದಿಬ್ರದ್ದೂ ಮಾತು ಕೇಳಿ ನಂಗೆ ಮೈ ಮೇಲೆ ಕೇರೆ ಹಾವು ಹರಿದಾಡಿದ ಹಾಗಾಯ್ತು. ಯೆಂತ ಮಾಡುದು? ಎಷ್ಟಾದ್ರು ತಮ್ಮ ಅಲ್ವಾ? ನಾನು ದಿಕ್ಕು ದೆಸೆ ಇಲ್ಲದವನ ಹಾಗೆ ಆದೆ. ಅವ, ಅವನ ಹೆಂಡತಿ ಹೇಳಿದ್ದಕ್ಕೆ ಕೋಲೆ ಬಸವನ ಹಾಗೆ ತಲೆ ಆಡಿಸಿದೆ. ಇಪ್ಪತ್ತೊಂದನೇ ದಿನದ್ದು ಕಾರ್ಯ ಮುಗಿಸಿ ಅವರೆಲ್ಲ ಬೊಂಬಾಯಿಗೆ ಹೋದ್ರು. ಅದಾಗಿ ಒಂದು ಒಂದೂವರೆ ತಿಂಗಳಿಗೆ ಸುರುವಾಯಿತು ನೋಡಿ ಈ ಕೊರೊನಾದ ಕಾಟ. ಎಲ್ಲ ಕಡೆ ಲಾಕ್‌ಡೌನ್, ಸೀಲ್‌ಡೌನ್. ಒಟ್ರಾಶಿ ಮಂಡೆ ಬಿಂಗ್ರಿ. ಮೇ ತಿಂಗಳಲ್ಲಿ ಯಾವಾಗ ಬೇರೆ ರಾಜ್ಯದಿಂದ ಬರ್ಲಿಕ್ಕೆ ಅಡ್ಡಿಯಿಲ್ಲ ಹೇಳಿದ್ರೋ ಆಗ ತಮ್ಮ, ಅವನ ಪರಿವಾರದವರೆಲ್ಲ ಒಂದು ಸಣ್ಣ ವ್ಯಾನ್ ಮಾಡಿಕೊಂಡು ಬಂದೇ ಬಿಟ್ಟರು. ಅವ ಬಂದದ್ದೇ ತಡ ಊರಲ್ಲಿ ಗಲಾಟೆ ಸುರುವಾಯಿತು. ಬೊಂಬಾಯಿಯಲ್ಲಿ ಇದ್ದವ್ರನ್ನು ಯಾಕೆ ಊರಿನ ಒಳಗೆ ಬರ್ಲಿಕ್ಕೆ ಬಿಟ್ರಿ? ಅಂತ ಊರಿನವರು ನನ್ನ ಮನೆಯ ಅಂಗಳಕ್ಕೆ ಬಂದು ಲಡಾಯಿ ಮಾಡಿದ್ರು. ನಾನು ಎಂತ ಸಮಾಧಾನದ ಮಾತು ಹೇಳಿದ್ರೂ ಊರಿನವರು ಕೇಳ್ಳಿಲ್ಲ. ಬೊಂಬಾಯಿಯಲ್ಲಿ ಊರು ಒರ್ಬಡಿ ಕೊರೊನಾ ಉಂಟು, ಇನ್ನು ಕುದ್ರೆಬೆಟ್ಟು ಪೂರ ಕೊರೊನಾದಿಂದ ಲಗಾಡಿ ಹೋಗ್ತದೇ ಅಂತ ಗಲಾಟೆಯೊ ಗಲಾಟೆ. ತಮ್ಮ ಕೇಳುವಷ್ಟು ಕೇಳಿದ. ಅವ ಸ್ವಲ್ಪ ರಫ್. ನಾನು ಹಿಂದೆಲ್ಲ ದ್ಯಾವಸ್ಥಾನಕ್ಕೆ ಬೂತ ಸ್ಥಾನಕ್ಕೆ ಊರಿನ ತೇರಿಗೆ ಅಂತೆಲ್ಲ ದುಡ್ಡು ಕೊಡುವಾಗ ಯಾವ ನಾಚಿಕೆಯೂ ಇಲ್ಲದೇ ತೆಕ್ಕೊಳ್ತಾ ಇದ್ರಿ? ಈಗ ಕಾನೂನು ಮಾತಾಡ್ತೀರಾ? ನಾನು ಯಾರಿಗೆ ಸಾ ಕ್ಯಾರ್ ಮಾಡುದಿಲ್ಲ. ಇದು ನನ್ನ ಮನೆ. ನನ್ನ ಇಷ್ಟ. ನೀವು ಯಾರಿಗೆ ಹೇಳ್ತೀರಾ ಹೇಳಿ ಹೋಗಿ ಅಂತ ಜೋರು ಮಾಡಿದ. ಊರಿನವರು ಸಾ ಬಿಡ್ಳಿಲ್ಲ. ಯಾರೋ ಆರೋಗ್ಯ ಇಲಾಖೆಯವರಿಗೆ, ತಹಶೀಲ್ದಾರರ ಆಫೀಸಿಗೆ, ಪೊಲೀಸರಿಗೆ ತಿಳಿಸಿದ್ರು. ಮರು ದಿವ್ಸ ಬಂದ್ರು ನೋಡಿ ಆರೋಗ್ಯ ಕಾರ್ಯಕರ್ತರು, ತಾಲ್ಲೂಕು ಆಫೀಸಿನವರು, ಪೊಲೀಸರು, ಹೀಗೆ ಜನದ ಮೇಲೆ ಜನ. ನಮ್ಮನ್ನು ಯಾರನ್ನು ಸಾ ಹೊರಗೆ ಹೋಗದ ಹಾಗೆ ಮಾಡಿ ಇಟ್ರು. ಬಂದವರ ಕೈಗೆ ಕ್ವಾರಂಟೈನ್ ಸೀಲ್ ಹಾಕಿ ಹೋದ್ರು. ಆಚೆಈಚೆ ಮನೆಯವರ ಹತ್ರ ನಮ್ಮ ಮೇಲೆ ಕಣ್ಣು ಇಡ್ಳಿಕ್ಕೆ ಹೇಳಿದ್ದಿದ್ರು. ಅವ್ರೆಲ್ಲ ನಮ್ಮನ್ನು ಕಳ್ಳರನ್ನು ನೋಡಿದ ಹಾಗೆ ನೋಡ್ಳಿಕ್ಕೆ ಸುರು ಮಾಡಿದ್ರು.

ಮನೆಯಲ್ಲಿ ಒಂದು ವಾರಕ್ಕೆ ಆಗುವಷ್ಟು ಅಕ್ಕಿ ಬೇಳೆ ತರಕಾರಿ ಎಲ್ಲ ಇತ್ತು. ಅದು ಖಾಲಿಯಾದ್ರೆ ಯಾರು ಸಾ ತಂದುಕೊಡುವವರಿಲ್ಲ! ನೆಂಟರು ಇಷ್ಟರಿಗೆ ಫೋನು ಮಾಡಿದ್ರೆ ನಾವು ನಿಮ್ಮ ಮನೆಯ ಹತ್ರ ಬರೂದಿಲ್ಲ, ಬಂದ್ರೆ ನಮಿಗೆ ಸಾ ಕೊರೊನಾ ಬರ್ತದೆ ಅಂತ ಹೇಳಿದ್ರು. ನಮ್ಮ ಅವಸ್ಥೆ ಯಾರಿಗೆ ಸಾ ಬೇಡ. ನಾನು ಶುಗರ್ ಪೇಶೆಂಟ್. ಕಾಲ ಕಾಲಕ್ಕೆ ಮಾತ್ರೆ ಇಲ್ಲದೇ ಇದ್ರೆ ಆಗೂದಿಲ್ಲ. ಮಾತ್ರೆ ಪೂರ ಖಾಲಿ. ಅದನ್ನು ತರಿಸ್ಲಿಕ್ಕೆ ಕಂಡಾಬಟ್ಟೆ ಕಷ್ಟಪಟ್ಟೆ. ಸರಿ ಅಂತೂ ಇಂತೂ ಹೇಗಾದ್ರೂ ಯಾರಿಗೋ ಫೋನ್ ಮಾಡಿ ದಮ್ಮಯ್ಯ ದಕ್ಕಯ್ಯ ಹಾಕಿ ಬೇಳೆ ಕಾಳು ತರಕಾರಿ ಎಲ್ಲ ಭಾರೀ ಕಷ್ಟದಲ್ಲಿ ತರಿಸಿಕೊಂಡೆ. ಆಮೇಲೆ ಸುರುವಾದದ್ದೇ ಸಮಸ್ಯೆ.'

'ಯಾಕೆ? ಎಂಥದಾಯ್ತು? ಮತ್ತೆ ಪಾಲು ಪಟ್ಟಿ ಅಂತ ಸುರು ಮಾಡಿದನಾ ತಮ್ಮ?'

'ಬರೇ ಪಾಲು ಪಟ್ಟಿ ಆದ್ರೆ ತೊಂದ್ರೆ ಇರ್ಲಿಲ್ಲ.'

'ಮತ್ತೆ?'

'ಅವ ತಳ ಊರಿದವನೇ, ಅಣ್ಣಾ ಇನ್ನು ಹೆಚ್ಚೂ ಕಡಿಮೆ ನಾವು ವಾಪಸ್ ಬೊಂಬಾಯಿಗೆ ಹೋಗೂದಿಲ್ಲ ಅಂದ. ನಾನು ಯಾಕೆ? ಎಂಥದಾಯ್ತು? ಅಂತ ಕೇಳಿದೆ. ನನಿಗೆ ಇತ್ತೀಚೆಗಿನ ವರ್ಷದಲ್ಲಿ ಕಂಡಾಬಟ್ಟೆ ಲಾಸ್ ಆಗಿದೆ. ಅಲ್ಲಿದ್ದು ಮನೆ, ಕಾರ್ ಎಲ್ಲ ಮಾರಿ ಸಾಲ ತೀರಿಸಿದೆ. ಊರಿನ ಜನ ಎಲ್ಲ ವರ್ಷ ವರ್ಷ ಕೆಲಸ ಬಿಡ್ತಾ ಬಂದದ್ರಿಂದ ಕೆಲಸಕ್ಕೆ ಜನ ಸಿಗೂದು ಸಾ ಕಷ್ಟ ಆಯ್ತು.